## ಕವಿತೆ



ಸಮುದ್ಯತಾ ವೆಂಕಟರಾಮು

ಕಲೆ: ರಮೇಶ್ ಚವ್ಹಾಣ

# ಹೊಸ ಮೂಕಾಂಬಿಕೆ



ಮಿಸುಕಾಡುತಾವೆ ಮಾತು
ಎದೆಯ ಜೋಳಿಗೆಯಲ್ಲಿ
ಒಮ್ಮೆ ತುಸು ಪಿಸುದನಿ
ಒಮ್ಮೊಮ್ಮೆ ದನಿಯೆತ್ತಿ
ಹೊರಗೆಂದೂ ಕೇಳದು!

ಅಲ್ಲೇ ಹುಟ್ಟಿದವು
ಎಲ್ಲಿಂದಲೋ ಬಂದವು
ಒಂದನ್ನೊಂದು ಕೂಡಿ
ಮೊಟ್ಟೆ ಮರಿಯಾಗಿ
ಕೂತಿವೆ ಅಲ್ಲೆ ಒತ್ತೊತ್ತಾಗಿ

ಚುಕ್ಕು ಬಡಿದು ಗಲ್ಲ ಹಿಂಡಿ
ಕಚಗುಳಿಯಿಕ್ಕಿ ಮುತ್ತಿಟ್ಟು
ಸದ್ದು ಹೊರ ಸೋರದಂತೆ
ಕೈ ಕಟ್ ಬಾಯ್ ಮುಚ್
ಕೈ ಕಟ್ ಬಾಯ್ ಮುಚ್

ಬಯಸುತ್ತಾವೆ ಹೊರಬರಲು
ಭಯ! ಬಂದರೆ ಉಡದಂತೆ
ಹಿಡಿದು, ಬೇಡದ ಬಣ್ಣ ಬಳಿದು
ಎಲ್ಲೆಲ್ಲಿಗೋ ಒಯ್ದು ಹಿಂಡಿದರೆ
ಹಾವೆಂಬುದು ಹಗ್ಗವಾದರೆ!

ತೆಪ್ಪಗೆ ಒಳಗಿರಿ ಎಂದು ತಳ್ಳಿ
ಜೋಳಿಗೆಗೆ ಜೀರುಗುಣಿಕೆ!
ಉಸಿರುಗಟ್ಟಿದೆ ಅವಕ್ಕೀಗ
ಸಾಯಬಹುದು ಇಂದೋ ನಾಳೆ
ಆಮೇಲೆ ನಾನು ಮೂಕಾಂಬಿಕೆ!

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68